## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸರ್ಕಾರದ ಇಲಾಖೆಗಳಲ್ಲಿ ಜಾರಿಯಲ್ಲಿರುವ ಆರ್ಥಿಕ ಮಿತವ್ಯಯ ಕ್ರಮಗಳ ಸಡಿಲಿಕೆ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ ಆಇ 3 ಬಿಇಎಂ 2001 ದಿನಾಂಕ : 17-10-2001.
2) ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 6 ಆಸುಅ 2000 ದಿನಾಂಕ : 23-9-2003.
3) ಸರ್ಕಾರದ ಆದೇಶ ಸಂಖ್ಯೆ ಆಇ 2 ಬಿಇಎಂ 2003 ದಿನಾಂಕ : 5-7-2004.
4) ಅನಧಿಕೃತ ಟಿಪ್ಪಣಿ ಸಂಖ್ಯೆ : ಸಿಆಸುಇ 2 ಆಸುಅ 2004 ದಿನಾಂಕ : 1-3-2004.

* * * * * * *

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 17-10-2001ರ ಆದೇಶದಲ್ಲಿ ಯೋಜನೆ ಮತ್ತು ಯೋಜನೇತರ ಅಡಿ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಅಥವಾ ಬಡ್ತಿ ಮೂಲಕ ಆರ್ಥಿಕ ಇಲಾಖೆಯ ಪೂರ್ವ ಸಹಮತಿಯೊಂದಿಗೆ ಮಾತ್ರ ತುಂಬುವಂತೆ ಸೂಚನೆ ನೀಡಲಾಗಿತ್ತು. ಮತ್ತು ಈ ರೀತಿ ಹುದ್ದೆಗಳನ್ನು ತುಂಬುವಾಗ ದಿನಾಂಕ 1-4-2000ಕ್ಕೆ ಖಾಲಿ ಇರುವ ಹುದ್ದೆಗಳಲ್ಲಿ ಪ್ರತಿ ವೃಂದದಲ್ಲಿ ಶೇಕಡ 80ರಷ್ಟನ್ನು ತುಂಬದೇ ಹಾಗೆಯೇ ಖಾಲಿ ಇಡುವ ಬಗ್ಗೆ ಖಾತರಿ ಪಡಿಸಿಕೊಳ್ಳುವಂತೆ ತಿಳಿಸಲಾಗಿತ್ತು. 2000-2001ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯ ಅನ್ವಯ ದಿನಾಂಕ 1-4-2000ಕ್ಕೆ ಖಾಲಿ ಇರುವ ಹುದ್ದೆಗಳಲ್ಲಿ ಶೇಕಡ 80ರಷ್ಟು ಹುದ್ದೆಗಳನ್ನು ರದ್ದುಗೊಳಿಸುವ ವಿಷಯವನ್ನು ಪರಿಶೀಲಿಸಲು ಮೇಲೆ (2)ರಲ್ಲಿ ಓದಲಾದ ದಿನಾಂಕ 23-9-2003ರ ಸರ್ಕಾರದ ಆದೇಶದಲ್ಲಿ ಅಧಿಕಾರಯುತ ಸಮಿತಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ರಚಿಸಿರುತ್ತದೆ.

ಮೇಲೆ (3) ರಲ್ಲಿ ಓದಲಾದ ದಿನಾಂಕ 5-7-2004ರ ಸರ್ಕಾರದ ಆದೇಶದಲ್ಲಿ ಖಾಲಿ ಇರುವ ಹುದ್ದೆಗಳನ್ನು ಬಡ್ತಿ ಮೂಲಕ ಮತ್ತು ನೇಮಕಾತಿ ಮೂಲಕ ತುಂಬುವ ಪೂರ್ವದಲ್ಲಿ ಆರ್ಥಿಕ ಇಲಾಖೆಯ ಸಹಮತಿ ಪಡೆಯುವ ಬಗೆಗಿನ ಸೂಚನೆಗಳನ್ನು ಮತ್ತೆ ಮುಂದುವರಿಸಲಾಗಿದೆ. ಸದರಿ ಆದೇಶದಲ್ಲಿ ಹುದ್ದೆಗಳ ಸೃಜನೆ, ನೇಮಕಾತಿ ಮತ್ತು ಬಡ್ತಿಯ ಪ್ರಸ್ತಾವಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಸಿಆಸುಇ 2 ಆಸುಅ 2004 ದಿನಾಂಕ 1-3-2004ರಲ್ಲಿ ಸೂಚಿಸಿರುವಷ್ಟು ಪ್ರಮಾಣದ ಖಾಲಿ ಹುದ್ದೆಗಳನ್ನು ಇಲಾಖೆಗಳು ರದ್ದುಗೊಳಿಸದಿದ್ದ ಪಕ್ಷದಲ್ಲಿ ಪರಿಗಣಿಸಲಾಗುವುದಿಲ್ಲ ಎಂದು ಸಹ ತಿಳಿಸಲಾಗಿದೆ.

ಸರ್ಕಾರವು ಈ ಇಡೀ ವಿಷಯವನ್ನು ಪರಿಶೀಲಿಸಿದೆ ಮತ್ತು ಇಲಾಖೆಗಳಲ್ಲಿ ಬಡ್ತಿ ಹುದ್ದೆಗಳನ್ನು ತುಂಬುವುದಕ್ಕೆ ಸಂಬಂಧಿಸಿದಂತೆ ಆರ್ಥಿಕ ಮಿತವ್ಯಯ ಕ್ರಮಗಳನ್ನು ಸಡಿಲಿಸಲು ನಿರ್ಧರಿಸಿದೆ. ಆದ್ದರಿಂದ ಈ ಆದೇಶ.

### ಸರ್ಕಾರಿ ಆದೇಶ ಸಂಖ್ಯೆ : ಆಇ 1 ಬಿಇಎಂ 2005
### ಬೆಂಗಳೂರು, ದಿನಾಂಕ 21ನೇ ಜೂನ್ 2005.

1) ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಬಡ್ತಿ ಹುದ್ದೆಗಳನ್ನು ತುಂಬುವುದಕ್ಕೆ ಸಂಬಂಧಿಸಿದಂತೆ ಆರ್ಥಿಕ ಮಿತವ್ಯಯ ಕ್ರಮಗಳಿಂದ ಇಲಾಖೆಗಳಿಗೆ ವಿನಾಯಿತಿ ನೀಡಲು ಸರ್ಕಾರವು ಹರ್ಷಿಸುತ್ತದೆ.

ಮು.ತಿ.ನೋ.

(ಅ). ಅನಧಿಕೃತ ಟಿಪ್ಪಣಿ ಸಿಆಸುಇ 2 ಈಹಾಲ 2004 ದಿನಾಂಕ 1-3-2004ರಲ್ಲಿ ತಿಳಿಸಿರುವಂತೆ ಅಧಿಕಾರಯುತ ಸಮಿತಿಯು ಶಿಫಾರಸ್ಸು ಮಾಡಿರುವ ದಿನಾಂಕ 1-4-2000ರಲ್ಲಿರುವಂತೆ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತ ಶೇಕಡ 20ರಷ್ಟು ಖಾಲಿ ಹುದ್ದೆಗಳು, ಪೋಲೀಸ್ ಮತ್ತು ಅರಣ್ಯ ಇಲಾಖೆಗಳಲ್ಲಿ ಶೇಕಡ 50ರಷ್ಟು ಖಾಲಿ ಹುದ್ದೆಗಳು ಮತ್ತು ಇತರ ಇಲಾಖೆಗಳಲ್ಲಿ ಶೇಕಡ 80ರಷ್ಟು ಖಾಲಿ ಹುದ್ದೆಗಳನ್ನು ರದ್ದುಗೊಳಿಸಲು ಕ್ರಮವನ್ನು ಕೈಗೊಂಡಿದ್ದಲ್ಲಿ ;

ಅಥವಾ

(ಆ) ಅಧಿಕಾರಯುತ ಸಮಿತಿಯಿಂದ ಹುದ್ದೆಗಳನ್ನು ರದ್ದುಮಾಡುವ ಪ್ರಕ್ರಿಯೆಯಿಂದ ವಿನಾಯಿತಿ ಪಡೆಯಲು ಕ್ರಮವನ್ನು ಕೈಗೊಂಡಿದ್ದಲ್ಲಿ.

ಆದಾಗ್ಯೂ ಅಧಿಕಾರಯುತ ಸಮಿತಿಗೆ ವಿನಾಯಿತಿಗಾಗಿ ಸಲ್ಲಿಸುವ ಪೂರ್ವದಲ್ಲಿ ಆರ್ಥಿಕ ಇಲಾಖೆಯ ಸ್ಪಷ್ಟ ಅಭಿಪ್ರಾಯವನ್ನು ಆಯಾ ಪ್ರಕರಣಗಳಲ್ಲಿ ತಪ್ಪದೇ ಪಡೆಯತಕ್ಕದ್ದು.

2. ಇಲಾಖೆಗಳು ಇಂತಹ ಹುದ್ದೆಗಳನ್ನು ರದ್ದುಗೊಳಿಸಲು ಆದೇಶಗಳನ್ನು ಹೊರಡಿಸಿದ್ದಲ್ಲಿ ಅಥವಾ ಅಧಿಕಾರಯುತ ಸಮಿತಿಯಿಂದ ಹುದ್ದೆಗಳನ್ನು ರದ್ದುಗೊಳಿಸಲು ವಿನಾಯಿತಿ ಪಡೆದು ತತ್ಪರಿಣಾಮವಾಗಿ ಸಿ.ಆ.ಸು. ಇಲಾಖೆ / ಆಡಳಿತ ಇಲಾಖೆಗಳು ಆದೇಶ ಹೊರಡಿಸಿದ್ದಲ್ಲಿ ಇಂತಹ ಪ್ರಕರಣಗಳನ್ನು ಆರ್ಥಿಕ ಇಲಾಖೆಗೆ ಸಲ್ಲಿಸಬೇಕಾಗಿಲ್ಲ.

3. ಮೇಲೆ ತಿಳಿಸಿದಂತೆ ಹುದ್ದೆಗಳನ್ನು ರದ್ದು ಮಾಡುವ ಬಗ್ಗೆ ಅಥವಾ ಅಧಿಕಾರಯುತ ಸಮಿತಿಯಿಂದ ಹುದ್ದೆಗಳನ್ನು ರದ್ದುಗೊಳಿಸುವ ಪ್ರಕ್ರಿಯೆಯಿಂದ ವಿನಾಯಿತಿ ಪಡೆದಿದ್ದಲ್ಲಿ ಸಂಬಂಧಿಸಿದ ಆದೇಶಗಳೊಂದಿಗೆ ಆಡಳಿತ ಇಲಾಖೆಗಳು ಮುಂಚಿತವಾಗಿ ತಪ್ಪದೆ ಆರ್ಥಿಕ ಇಲಾಖೆಗೆ ಮಾಹಿತಿಯನ್ನು ನೀಡತಕ್ಕದ್ದು. ಇತರೇ ಪ್ರಕರಣಗಳಲ್ಲಿ ಆರ್ಥಿಕ ಇಲಾಖೆಯೊಂದಿಗೆ ತಪ್ಪದೇ ಸಮಾಲೋಚಿಸತಕ್ಕದ್ದು.

4. ಈ ಮೇಲ್ಕಂಡ ವಿನಾಯಿತಿಯು ಜಿಲ್ಲಾ ಪಂಚಾಯತ್‌ಗಳು, ಸಹಾಯಾನುದಾನ ಸಂಸ್ಥೆಗಳು, ನಗರ ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ವಲಯ ಉದ್ದಿಮೆಗಳು, ರಾಜ್ಯ ಸ್ವಾಯತ್ತ ಸಂಸ್ಥೆಗಳು ಮತ್ತು ನಿಗಮಗಳಿಗೆ ಅನ್ವಯವಾಗುವುದಿಲ್ಲ. ಆದೇಶ ಸಂಖ್ಯೆ ಆಇ 2 ಬಿಇಎಂ 2003 ದಿನಾಂಕ 5-7-2004ರಲ್ಲಿ ಹೊರಡಿಸಲಾದ ಸೂಚನೆಗಳು ಇಂತಹ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಈಗಲೂ ಜಾರಿಯಲ್ಲಿರುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ. ಶಾಮರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಎಫ್.ಆರ್. ಮತ್ತು ಬಿ.ಸಿ.ಸಿ)

ಇವರಿಗೆ :
1) ಮಹಾಲೇಖಪಾಲರು (ಎ ಮತ್ತು ಇ) / ಆಡಿಟ್ (1 ಮತ್ತು 2), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3) ಎಲ್ಲಾ ಇಲಾಖಾ ಮುಖ್ಯಸ್ಥರು,
4) ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
5) ರಾಜ್ಯದ ಸಾರ್ವಜನಿಕ ಉದ್ಯಮಗಳ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರುಗಳು,
6) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ – ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಣೆಗಾಗಿ.